೧	೨	೩	೪	೫
೮	ತೊಗರಿ	೧೦೩೩	೧೮೦೩	—
೯	ಕಡಲೆ	—	—	೩೯೨
೧೦	ನೆಲಗಡಲೆ	೧೨೯೨	೪೭೪	೧೧೮೨
೧೧	ಸೂರ್ಯಕಾಂತಿ	೪೪೫೫	೪೪೫೫	೩೨೮
೧೨	ಕಂಸುಮೆ	—	—	೨೫೮
	ಒಟ್ಟು	೫೫೧೫	೩೮೯೧	೨೯೯೨

ಅ) ಇಲ್ಲ.

ಇ) 'ಅ' ಪ್ರಶ್ನೆಗೆ ಕೊಟ್ಟಿರುವ ಉತ್ತರದಿಂದ ಇದು ಉಬ್ಬವಿಸುವುದಿಲ್ಲ.

ವಯಸ್ಕರ ಶಿಕ್ಷಣ

೬೪. ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ). —ಮಾನ್ಯ ಪ್ರಾಥಮಿಕ ಮತ್ತು ಪೂರ್ಣಮಿಕ ಶಿಕ್ಷಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೇಂದ್ರ ಸರ್ಕಾರದ ಗ್ರಾಮಾಂತರ ಕ್ರಿಯಾತ್ಮಕ ಸಾಕ್ಷರತಾ ಯೋಜನೆಯನ್ವಯ ನಡೆಯುತ್ತಿದ್ದ ವಯಸ್ಕರ ನಾಲ್ಕು ಶಿಕ್ಷಣ ಕೇಂದ್ರಗಳನ್ನು ಖಾಸಗೀ ಸಂಸ್ಥೆಯವರಿಗೆ ಬಿಟ್ಟುಕೊಟ್ಟಿರುವುದು ನಿಜವೇ ?

ಆ) ಹಾಗಿದ್ದಲ್ಲಿ ರಾಜ್ಯದಲ್ಲಿನ ಇನ್ನುಳಿದ ಶಿಕ್ಷಣ ಕೇಂದ್ರಗಳನ್ನೂ ಸಹ ಖಾಸಗಿಯವರಿಗೆ ವಹಿಸಿಕೊಡುವ ಆಲೋಚನೆ ಸರ್ಕಾರಕ್ಕಿದೆಯೇ ?

ಇ) ಖಾಸಗಿ ಸಂಸ್ಥೆಗಳಿಗೆ ವಹಿಸಿಕೊಟ್ಟಿರುವ ಬಗ್ಗೆ ಕೇಂದ್ರ ಸರ್ಕಾರದವರು ವಿರೋಧವನ್ನೇನಾದರೂ ವ್ಯಕ್ತಪಡಿಸಿದ್ದಾರೆಯೇ ?

ಈ) ಹಾಗಿದ್ದಲ್ಲಿ ಈಗಾಗಲೇ ಖಾಸಗೀ ಸಂಸ್ಥೆಗಳಿಗೆ ವಹಿಸಿರುವ ಚಿಕ್ಕಮಗಳೂರು, ಚಿತ್ರದುರ್ಗ ಮತ್ತು ಮೈಸೂರು ಜಿಲ್ಲೆಗಳಲ್ಲಿನ ಶಿಕ್ಷಣ ಸಂಸ್ಥೆಗಳನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳದಿರಲು ಕಾರಣವೇನು ?

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು).—

ಅ) ನಾಲ್ಕು (೪) ಗ್ರಾಮಾಂತರ ಕ್ರಿಯಾತ್ಮಕ ಸಾಕ್ಷರತಾ ಯೋಜನೆಗಳನ್ನು ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯಂ ವತಿಯಿಂದ ನಡೆಸಲ್ಪಡುತ್ತಿವೆ.

ಆ) ಇಲ್ಲ.

ಇ) ಹೌದು.

ಈ) ಸರ್ಕಾರವು ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯವರಿಂದ ನಾಲ್ಕು ಗ್ರಾಮಾಂತರ ಕ್ರಿಯಾತ್ಮಕ ಸಾಕ್ಷರತಾ ಯೋಜನೆಗಳನ್ನು ವಶಪಡಿಸಿಕೊಳ್ಳಲು ಸೂಚನೆ ನೀಡಿದೆ. ಆದರೆ ನೌಕರರ ಒಕ್ಕೂಟ, ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಸಿಬ್ಬಂದಿ ಇವುಗಳಿಗೆ ಸಂಬಂಧಿಸಿದ ಸಿಬ್ಬಂದಿಗಳನ್ನು ತೆಗೆದುಕೊಳ್ಳುವ ಬಗ್ಗೆ ಕೋರ್ಟಿನಲ್ಲಿ ತಕರಾರು ಮಾಡಿರುವುದರಿಂದ ವಶಪಡಿಸಿಕೊಳ್ಳಲು ಕಾಲಾವಕಾಶ ಬೇಕಾಗಿದೆ.